ದಿವಾಳಿಯಾದ ಡಿಕ್ರೀ ದೇಣೇದಾರ ಮದ್ದಗಿರಿ ತಾಲ್ಲೂಕು ಕಂಭತ್ತದಹಳ್ಳಿಲಿತಕ್ಕ ಮುದ್ದರಂಗೇಗವುಡನ ಮಗ ಕಾವಲ್ಲಯ್ಯನ ವಿಷಯದಲ್ಲಿ—

ಸ್ಸ್ 1889ನೇ ಇಸವಿ ದಿವಾಳಿ ಕೇಸ್ ನಂಬರ್ 143.

ಹುಕುಂ.

ಮೇಲ್ಕಂಡ ಕಾವಲ್ಲಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿರಾದ ಮೆ|| ಯ್ಲರ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಕಾವಲ್ಲಯ್ಯನ ಪರವಾಗಿ ಅಡ್ವೊಕೇಟ್ ಮೆ|| ಕೆ. ಟಿ. ನರಸುಹ್ಮಯ್ಯಂಗಾರ್ರನ್ನೂ ಮತ್ತು ಸದರಿಯವನ ಲೇಣೇದಾರ್ರಾದ 1ನೇ ಕ್ರಡಿಟರ ತರಫ್ ಅಡ್ವೊಕೇಟ್ ಮೆ|| ಎಲ್. ಶ್ರೀನಿವಾಸಯ್ಯಂಗಾರ್ರವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—2—3—4ನೇ ಕ್ರಡಿಟರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಕಾವಲ್ಲಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಉತ್ತರವಾಗಿಯಾಗಲಿ ವಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇಧರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಸ್ 1889ನೇ ಇಸವಿ ಅಕ್ಟೋಬರ್ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರಿ ನಮ್ಮ ದಸ್ತಖತ್ತಿನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಸೊಬಲಗು	ಯಾವಾಗ ದೆಪ್ಪಣ್ಣಿಂ ಬಿದ್ದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಷರಾ
1	ಮದ್ದಗಿರಿರತಕ್ಕ ತಿಪ್ಪಾಪುರ ಸುಬ್ಬಯ್ಯ ..	86 12 0	..	ಮದ್ದಗಿರಿ ಮುನಸೀಫ್ ಕೋರ್ಟು 1887 ಆ|| 346ನೇ ಡಿ|| ಮೊ|| ವಂದೂವರೆ ವರುಷಕ್ಕೆ ಮುಂಚೆ ಬರೆಕೊಟ್ಟ ಛಾಪಾಕಾಗದ ಪತ್ರದ ಬಾಬತು—ಜವಳ ಬಾಬತು ಸಹ ಛಾಪಾಕಾಗದ ಪತ್ರದ ಬಾಬತು	
2	ಡಿಟೋ ಪದ್ದಕಟ್ಟಿ ರಾಮಂಣ ..	17 0 0 3 0 0	..		
3	ಡಿಟೋ ರಿಕಾರ್ಡ್‌ಕೀಪರ್ ವೆಂಕಟನುಬ್ಬಯ್ಯ ..	15 0 0	..		
4	ಡಿಟೋ ಜವಳಿ ಗವ್ವರಪ್ಪನವರಿಗೆ ..	5 0 0	..	ಜವಳ ಬಾಬತು	
	ಜುಮ್ಲಾ	126 12 0			

ಎಲ್. ಆನಂತಸ್ವಾಮಿರಾವ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 249.

ವ್ಯತಪಟ್ಟ ಮಲ್ಲಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಬಸಪ್ಪ ಮೈನರ್, ಗಾರ್ಡಿಯನ್ ಅಜ್ಜಿ ಪುಟ್ಟಮ್ಮನು ವ್ಯತಪಟ್ಟ ಸದರೀ ಮಲ್ಲಂಣನವರಿಗೆ ಮೈನರ್ ಮಗ ಆಗಬೇಕೆಂಬ ಹಕ್ಕುದಾರಿ ಮೇರೆ ನಜೀನಗೂಗು ತಾ|| ಇಬ್ಬುಜಾಲ್ ಗ್ರಾಮ ಸ್ಥಳದ ಸದರೀ ಪುಟ್ಟಮ್ಮನವರು ಸದರೀ ವಾಸಸ್ಥನಾಗಿ ವ್ಯತಪಟ್ಟಮಲ್ಲಣ್ಣನವರ ಜೀವದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಮಲ್ಲಂಣನವರ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.